# ಶುಭವಾರ್ತೆ

"ನೀವು ಕ್ರಿಸ್ತನವರಾಗಿದ್ದರೆ, ಅಬ್ರಹಾಮನ ಸಂತತಿಯವರೂ
ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ"
— ಗಲಾತ್ಯ 3:29.

## ದೇವರ ವಾಗ್ದಾನಗಳು.

ಶ್ರೀ ಪೌಲನು ಗಲಾತ್ಯದವರಿಗೆ ಬರೆಯುವಾಗ, "ನೀವು ಕ್ರಿಸ್ತನವರಾಗಿದ್ದರೆ, ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" ಎಂದು ತಿಳಿಸುತ್ತಾನೆ. ಯಾರು ಈ ಅಬ್ರಹಾಮನು? ಅವನಿಗೂ ಈಗಿನ ಕ್ರೈಸ್ತರಿಗೂ ಏನು ಸಂಬಂಧ? ಆ ವಾಗ್ದಾನ ಯಾವುದು? ಆ ಅಬ್ರಹಾಮನ ವಾಗ್ದಾನಕ್ಕೆ ನಾವು ಹೇಗೆ ಬಾಧ್ಯರಾಗುತ್ತೇವೆ ? ಹೀಗೆ ಯಾರಾದರೊಬ್ಬರು ಕೇಳ ಬಹುದು. ಅನೇಕರು ಸತ್ಯವೇದದಲ್ಲಿ ಅಬ್ರಹಾಮನ ಹೆಸರನ್ನು ಓದಿರುತ್ತಾರೆ. ಸುಮಾರು 2000 ವರ್ಷಗಳ ಹಿಂದೆ ಜೀವಿಸಿದ್ದ ಒಬ್ಬ ವ್ಯಕ್ತಿಯಾದ ಅಬ್ರಹಾಮನ ಬಗ್ಗೆ ಶ್ರೀ ಪೌಲನು ತನ್ನ ಪತ್ರಿಕೆಯಲ್ಲಿ ಉಲ್ಲೇಖಿಸುತ್ತಾನೆ.

### ಓದುಗರಿಗೆ.

ಇದೀಗ ನಮ್ಮ ನಾಲ್ಕನೇ ಸಂಚಿಕೆಯು ಹೊರ ಬರುತ್ತಿದೆ. ಈ ಪತ್ರಿಕೆಯಲ್ಲಿ ಬರುವ ಸತ್ಯವೇದ ವಿಷಯಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು ನಮಗೆ ತಿಳಿಸಬೇಕಾಗಿ ಕೋರಿದೆ. ದೇವರ ಕೃಪೆಯಿಂದ ಅನೇಕ ಜನರಿಗೆ ಈ ಪತ್ರಿಕೆಯನ್ನು ಮುಟ್ಟಿಸಲು ಸಾಧ್ಯವಾಗುತ್ತಿದೆ. ಕಳೆದ ತಿಂಗಳಲ್ಲಿ ನಮ್ಮ ಓದುಗರಲ್ಲಿ ಕೆಲವರು ಈ ಪತ್ರಿಕೆಯ ಉಪಯುಕ್ತತೆಯನ್ನರಿತು, ತಮ್ಮ ಬಂಧು ಮಿತ್ರರ ವಿಳಾಸಗಳನ್ನು ಕಳುಹಿಸಿ, ಅವರಿಗೂ ಈ ಪತ್ರಿಕೆಯನ್ನು ಕಳುಹಿಸಲು ಕೋರಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ದೇವರು ಅವರನ್ನು ಆಶೀರ್ವದಿಸಲಿ. ಅದೇ ರೀತಿ ಪ್ರತಿಯೊಬ್ಬ ಓದುಗರೂ ಇದು ತಮ್ಮ ಹೊಣೆಯೆಂದರಿತು, ಆಸಕ್ತರಾದ ಬಂಧು ಮಿತ್ರರ ವಿಳಾಸಗಳನ್ನು ನಮಗೆ ಕಳುಹಿಸಿದರೆ ಒಳ್ಳೆಯದು. ಆಸಕ್ತರಾದವರೇ ನಮಗೊಂದು ಅಂಚೆ ಕಾರ್ಡ್ ಬರೆದರೆ ಉತ್ತಮ. ಇದುವರೆಗೂ ನಮಗೆ ದೊರೆತ ವಿಳಾಸಗಳಿಗೆ ನಾವು ಈ ಪತ್ರಿಕೆಯನ್ನು ಉಚಿತವಾಗಿ ಕಳುಹಿಸುತ್ತಿದ್ದೇವೆ. ಇನ್ನು ಮುಂದೆಯೂ ಇದೇ ರೀತಿಯಾಗಿ <u>ಉಚಿತವಾಗಿ</u> ಈ ಪತ್ರಿಕೆಯನ್ನು ಪಡೆಯಬಯಸುವವರು ನಮಗೆ ಕೂಡಲೇ ತಮ್ಮ ವಿಳಾಸದೊಂದಿಗೆ ಬರೆಯುವುದು. ವಿಳಾಸ ಬದಲಾವಣೆ ಇದ್ದಲ್ಲಿ ಕೂಡ ನಮಗೆ ತಕ್ಷಣ ತಿಳಿಸಬೇಕಾಗಿ ಕೋರುವ,

ಭಾ. ಚಂದುದಾಸ್.

ಈ ಅಬ್ರಹಾಮನ ವಿಷಯದಲ್ಲಿ ಅನೇಕರು ಸತ್ಯವೇದದಲ್ಲಿ ಓದಿದ್ದರೂ ಕೂಡ, ಆತನಿಗಾದ ವಾಗ್ದಾನಗಳೇನು? ಆತನ ಮೂಲಕ ನಮಗೆ ಸಿಗುವ ಪಾಲೇನು? ಎಂಬುದರ ಬಗ್ಗೆ ಸಾಮಾನ್ಯವಾಗಿ ಯಾರೂ ಯೋಚಿಸಲಾರರು. ಶ್ರೀ ಪೌಲನು ಬರೆಯುವಾಗ, ಕ್ರಿಸ್ತನಿಗೂ ಅಬ್ರಹಾಮನಿಗೂ ಸಂಬಂಧವನ್ನು ಸೂಚಿಸುತ್ತಾನೆ. ಕ್ರಿಸ್ತನು "ಪಿತೃಗಳಿಗೆ ಉಂಟಾದ ವಾಗ್ದಾನಗಳನ್ನು ದೃಢಪಡಿಸುತ್ತಾನೆ." (ರೋಮಾ 15:8) ಆದ್ದರಿಂದ ಕ್ರಿಸ್ತನ ಸೇವೆಗೂ ಅಬ್ರಹಾಮನಿಗೆ ಮಾಡಿದ "ವಾಗ್ದಾನಗಳಿಗೂ" ಸಂಬಂಧವಿದೆಯೆಂದು ಸತ್ಯವೇದವು ನಮಗೆ ತಿಳಿಯಪಡಿಸುತ್ತದೆ. ಇಂದು ಅನೇಕ ಕ್ರೈಸ್ತರು ಸತ್ಯವೇದದಲ್ಲಿನ ಹಳೇ ಒಡಂಬಡಿಕೆಯ ಭಾಗವನ್ನು ಓದುವುದು ಅನವಶ್ಯವೆಂದು ಭಾವಿಸಿ, ಓದುವುದಿಲ್ಲ ಅಲ್ಲದೆ ಇತರರೂ ಅದನ್ನು ಓದುವುದು ಅನವಶ್ಯವೆಂದು ಬೋಧಿಸುವವರಿದ್ದಾರೆ. ಆದರೆ ಅಬ್ರಹಾಮನಿಗೂ ಆತನಿಗೆ ಮಾಡಿದ ವಾಗ್ದಾನಗಳೂ ಎಲ್ಲಿ ಸಿಗುತ್ತವೆ ? ಹಳೇ ಒಡಂಬಡಿಕೆಯ ಭಾಗದಲ್ಲಿ ನೋಡದೆ ನಮಗೆ ಹೊಸ ಒಡಂಬಡಿಕೆಯು ಅರ್ಥವಾಗುವುದಿಲ್ಲ (ನಮ್ಮ ಪತ್ರಿಕೆಯ 2ನೇ ಸಂಚಿಕೆಯಲ್ಲಿ "ನಾವು ಸತ್ಯವೇದವನ್ನು ಏಕೆ ಓದಬೇಕು?" ಎಂಬ ಲೇಖನವನ್ನು ನೋಡಿ. ) ಹಳೇ ಒಡಂಬಡಿಕೆಯನ್ನು ಓದುವುದು ಬೇಡ ಅಥವಾ ಅನವಶ್ಯಕ ಎಂದು ಹೇಳುವ ಅನೇಕರಿಗೆ ಸತ್ಯವೇದ "ವಾಗ್ದಾನಗಳ ಬಗ್ಗೆ" ತಿಳಿಯುವ ಪ್ರಾಮುಖ್ಯತೆಯ ಅರಿವನ್ನುಂಟು ಮಾಡುತ್ತದೆ.

ಯೇಸುಕ್ರಿಸ್ತನು "ಪಿತೃಗಳಿಗೆ ಮಾಡಿದ ವಾಗ್ದಾನಗಳನ್ನು ದೃಢಪಡಿಸಲು" ಬಂದನೆಂದು ನಾವು ಓದಿದಾಗ, ಆ ವಾಗ್ದಾನಗಳಾವುವೆಂದು ತಿಳಿದುಕೊಳ್ಳುವುದು ಅವಶ್ಯ. ಶ್ರೀ ಪೌಲನು ಈ ವಾಗ್ದಾನಗಳನ್ನು ಯೆಹೂದ್ಯರಿಗೆ ಕೊಡಲ್ಪಟ್ಟದ್ದು ಎಂದು ಹೇಳುತ್ತಾನೆ. (ರೋಮಾ 9:4). ಹಾಗಾದರೆ ಅಬ್ರಹಾಮನ ಸಂತತಿಯವರು ಯಾರು? "ನಂಬುವವರೇ ಅಬ್ರಹಾಮನ ಮಕ್ಕಳೆಂದು ತಿಳಿದುಕೊಳ್ಳಿರಿ" (ಗಲಾತ್ಯ 3:8). ಈ ಬಾಧ್ಯತೆಯು ನಂಬಿಕೆಯಿಂದಲೇ ಹೊರತು ಕರ್ಮ ಮಾರ್ಗದಿಂದಲ್ಲವೆಂದು 12ನೇ ವಚನದಲ್ಲಿ ಶ್ರೀ ಪೌಲನು ಸ್ಪಷ್ಟ ಪಡಿಸುತ್ತಾನೆ. ಇದರಿಂದ ನಾವು ತಿಳಿಯುವುದೇನು? ನಾವು ಈ ವಾಗ್ದಾನಗಳ ಬಗ್ಗೆ ತಿಳಿಯಬೇಕಾದರೆ ಅಬ್ರಹಾಮನ ಚರಿತ್ರೆಯನ್ನು ಓದಬೇಕು. ಅನೇಕರು

ನಾವು ಅಬ್ರಹಾಮನ ಚರಿತ್ರೆಯನ್ನು ಓದಿಲ್ಲವೇ ಎಂದು ಕೇಳ ಬಹುದು. ಅನೇಕರು ಓದಿದ್ದರೂ ಶ್ರೀ ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ತಿಳಿಸಿರುವಂತೆ ವಾಗ್ದಾನಗಳ ಬಗ್ಗೆ ತಿಳಿದಿರುವುದಿಲ್ಲ. ಹಾಗಾದರೆ ಈ ವಾಗ್ದಾನಗಳು ಕ್ರಿಸ್ತ ವಿಶ್ವಾಸಕ್ಕೆ ತಳಹದಿಯೆಂದು ಅನೇಕರಿಗೆ ತಿಳಿದಿಲ್ಲ. ಯೆಹೂದ್ಯ ಚರಿತ್ರೆಗಳು ಕೆಲವು ಸಾಮಾನ್ಯ ಘಟನೆಗಳಿಗೆ ಸಂಬಂಧಿಸಿದುವೆಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಪಿತೃಗಳಿಗೆ ಮಾಡಿದ ವಾಗ್ದಾನದಿಂದ ತಮಗೆ ವೈಯಕ್ತಿಕ ಪ್ರಯೋಜನವಿದೆಯೆಂದಾಗಲೀ ಅಥವಾ ಅಬ್ರಹಾಮನೇ ಆಗಲೀ ಇದರಿಂದ ಮುಂದೆ ಪ್ರಯೋಜನ ಪಡೆಯುತ್ತಾನೆಂದಾಗಲೀ ಅನೇಕರು ತಿಳಿದಿಲ್ಲ. ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಮಾಡಿದ ಈ ವಾಗ್ದಾನಗಳಿಂದ ತಮಗಾಗಲೀ ಮತ್ತಾರಿಗಾಗಲೀ ಪ್ರಯೋಜನವುಂಟೆಂದು ಅನೇಕರಿಗೆ ಗೊತ್ತಿಲ್ಲ. ಏಕೆಂದರೆ ಅವು ಪಿತೃಗಳಿಗೆ ಮಾಡಿದ ವಾಗ್ದಾನಗಳು. ಅವು ಅವರಿಗೂ ಮತ್ತು ಎಲ್ಲಾ ನೀತಿವಂತರಿಗೆ ಸಂಭವಿಸಿದಂತಾದ್ದು— ಅಂದರೆ ಸತ್ತ ಸ್ಥಿತಿಯಲ್ಲಿ ನಡೆದಂತಾದದ್ದು — ನೀತಿವಂತರಾಗಿದ್ದರೆ ಸತ್ತಾಗ ಪರಲೋಕಕ್ಕೆ ಹೋಗುವಂತಾದುದು. ಸಾಮಾನ್ಯವಾಗಿ ಕೀರ್ತನೆ ಸಂಗೀತಗಳಲ್ಲಿ, ಸತ್ತ ಕೂಡಲೆ ಪರಲೋಕಕ್ಕೆ ಹೋಗಿರುವಂತೆಯೂ ಹಾಡುವವರು ಅಲ್ಲಿಗೆ ಸೇರುವ ನಿರೀಕ್ಷೆಯೆಂದಲೂ ಹಾಡುವುದುಂಟು. ಅಲ್ಲದೆ ತಮ್ಮ ಮಕ್ಕಳಿಗೂ ಅದೇ ಹಾಡುಗಳನ್ನು ಕಲಿಸುತ್ತಾರೆ. ಅಂತಹ ಹಾಡುಗಳಲ್ಲಿ 'ತಂದೆಯು ಒಂದು ಸುಂದರ ಲೋಕದಲ್ಲಿರುವುದಾಗಿಯೂ ನಾವು ಅಲ್ಲಿಗೆ ಹೋಗಿ ಸೇರುವ ನಿರೀಕ್ಷೆ'' ಇರುವುದೇ ಮುಖ್ಯ ಸಾರಾಂಶವಾಗಿರುತ್ತೆ.

ಅನೇಕರ ಅಭಿಪ್ರಾಯದಲ್ಲಿ 'ವಾಗ್ದತ್ತ ದೇಶ'' ವೆಂದರೆ ದೇವರು ವಾಸಿಸುವ 'ಪರಲೋಕವೇ'' ಎಂದು ನಂಬಿಕೆ. ಎಲ್ಲಾ ವಿಶ್ವಾಸಿಗಳೂ ಸತ್ತಾಗ ಅವರವರ ಕೃತ್ಯಗಳ ಪ್ರಕಾರ ಅವರ ಆತ್ಮಗಳು ಮಹಿಮೆಯನ್ನು ಹೊಂದುತ್ತವೆಂದು ಅವರು ಹಾಡುತ್ತಾರೆ. ಅಂದರೆ ಈಗಾಗಲೇ ಆ ವಾಗ್ದಾನದ ಫಲಗಳನ್ನು ಅವರು ಪಡೆದಿರುತ್ತಾರೆಂದಾಯಿತು! (ಸತ್ತವರ ಸ್ಥಿತಿಯ ಬಗ್ಗೆ ನಮ್ಮ 3ನೇ ಸಂಚಿಕೆಯನ್ನು ಓದಿ).

ಶ್ರೀ ಪೌಲನು ಈ ಬಗ್ಗೆ ಏನು ಹೇಳುತ್ತಾನೆ? ಇವರೆಲ್ಲರೂ — ನಂದರೆ — ಪಿತೃಗಳಾದ ಅಬ್ರಹಾಮ, ಇಸಾಕ ಮತ್ತು ಯಾಕೋಬ — ಇವರುಗಳು ವಾಗ್ದಾನದ ಫಲಗಳನ್ನು ಹೊಂದದೆ, ಅವುಗಳನ್ನು ದೂರದಿಂದ ನೋಡಿ ಉಲ್ಲಾಸಪಟ್ಟು, ಮೃತಿ ಹೊಂದಿದರು. ತಾವು ಪರದೇಶದವರೂ ಪ್ರವಾಸಿಗಳೂ ಆಗಿದ್ದೇವೆಂದು ಒಪ್ಪಿ ಕೊಂಡರು (ಇಬ್ರಿಯ 11:13) ಇಲ್ಲಿ ಪಿತೃಗಳು ವಾಗ್ದಾನದ ಫಲಗಳನ್ನು ಹೊಂದದೆ ಮೃತಿ ಹೊಂದಿದರು. ಇದು ಸಾಂಪ್ರದಾಯಿಕ ಬೋಧನೆಗೆ ವಿರುದ್ಧವಾಗಿ ಕಾಣುತ್ತದಲ್ಲವೇ? ಏಕೆಂದರೆ ಅವರ ಪ್ರಕಾರ ಪಿತೃಗಳು ಮತ್ತು ವಿಶ್ವಾಸಿಗಳು ಮೃತರಾಗಿ ವಾಗ್ದಾನದ ಫಲವನ್ನು ಹೊಂದಿ, ವಾಗ್ದತ್ತ ದೇಶದಲ್ಲಿ ಸುರಕ್ಷಿತರಾಗಿದ್ದಾರೆಂದಲ್ಲವೇ? ಶ್ರೀ ಪೌಲನು ಇದೇ ಮಾತನ್ನು ಪುನಃ ದೃಢ ಪಡಿಸುತ್ತಾನೆ. 'ಇವರೆಲ್ಲರೂ....ವಾಗ್ದಾನದ ಫಲವನ್ನು ಹೊಂದಲಿಲ್ಲ ... ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು'' (ಇಬ್ರಿಯ 11:39) ಅವರೆಲ್ಲರೂ ನಂಬಿಕೆಯ ಮೂಲಕ ಒಳ್ಳೆಯ ಹೆಸರನ್ನು ಸಂಪಾದಿಸಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ. ಏಕೆ ? 'ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ದೇವರು ಸಂಕಲ್ಪಿಸಿದನು' ಆದ್ದರಿಂದ ಆ ವಾಗ್ದಾನಗಳ ಫಲವನ್ನು ಹೊಂದುವುದು ಅವರು ಸತ್ತಾಗಲೇ ಎಂಬುದು ಸತ್ಯವಲ್ಲ. ಮುಂದೆ ಒಂದು ಕಾಲದಲ್ಲಿ — ಅಂದರೆ ದೇವರು ನೇಮಿಸಿದ ದಿನದಲ್ಲಿ ಆ ಪಿತೃಗಳು ಆರಿಸಲ್ಪಟ್ಟ ಇತರರೊಂದಿಗೆ ತಮ್ಮ ವಾಗ್ದಾನದ ಫಲವನ್ನು ಹೊಂದುತ್ತಾರೆಂದು ಇದರಿಂದ ಸ್ಪಷ್ಟವಾಗುತ್ತದೆ.

ಈಗ ನಾವು ಆ ಪಿತೃಗಳು ಫಲ ಹೊಂದದೇ ಹೋದ ವಾಗ್ದಾನಗಳೇನೆಂದು ನೋಡೋಣ. ಶ್ರೀ ಪೌಲನು ಹೇಳುತ್ತಾನೆ, 'ಸಕಲ ಕುಲ, ಜನ, ಭಾಷೆಗಳವರು ಪೂರ್ತಿಯಾಗುವ ತನಕ'' ಅವರು ವಾಗ್ದಾನದ ಫಲಗಳನ್ನು ಹೊಂದುವುದಿಲ್ಲ. ಈ ವಿಷಯಗಳು ಕ್ರಿಸ್ತನ ಮೂಲಕ ಕೊಡಲ್ಪಟ್ಟಿರುವ ರಕ್ಷಣೆಯ ತಳಹದಿಯಾಗಿದೆಯೆಂದು ನಾವು ದೃಢೀಕರಿಸುತ್ತೇವೆ. ಇದನ್ನು ಸತ್ಯವೇದದ ಅನೇಕ ವಚನಗಳಿಂದ ನಾವು ನೋಡ ಬಹುದು.

ಶ್ರೀ ಪೌಲನು ಅಗ್ರಿಪ್ಪ ರಾಜನ ಮುಂದೆ ಪ್ರತಿವಾದ ಮಾಡುತ್ತಾ, 'ಪಿತೃಗಳಿಗೆ ಮಾಡಿದ ವಾಗ್ದಾನವು ನೆರವೇರುವದೆಂಬ ನಿರೀಕ್ಷೆಯನ್ನು ಕುರಿತೇ ವಿಚಾರಿಸಲ್ಪಡುವವನಾಗಿ ಇಲ್ಲಿ ನಿಂತಿದ್ದೇನೆ'' ಎಂದು ಹೇಳುತ್ತಾನೆ (ಅ.ಕೃ.26:6) ಮರಿಯಳು ಎಲಿಜಬೇತಳನ್ನು ಸಂಧಿಸಿದಾಗ, ಪಿತೃಗಳಿಗೆ ಮಾಡಿದ ವಾಗ್ದಾನದ ಬಗ್ಗೆ ತಿಳಿಸಿ ಅದು ಕ್ರಿಸ್ತನ ಮೂಲಕ ನೆರವೇರುವುದಾಗಿ ಹೇಳುತ್ತಾಳೆ (ಲೂಕ 1:51—55). ಸ್ನಾನಿಕನಾದ ಯೋಹಾನನ ತಂದೆ ಜಕರೀಯನು ಪವಿತ್ರಾತ್ಮಭರಿತನಾಗಿ ಅಬ್ರಹಾಮನಿಗೆ ಮಾಡಿದ ವಾಗ್ದಾನಗಳನ್ನು ಉಲ್ಲೇಖಿಸುತ್ತಾನೆ.(ಲೂಕ 1:68—73). ಮೀಕನೂ ಸಹ ಪಿತೃಗಳಿಗೆ ಮಾಡಿದ ವಾಗ್ದಾನದ ಬಗ್ಗೆ ಹೇಳುತ್ತಾನೆ (ಮೀಕ 7:20) ಈ ವಚನಗಳನ್ನು ನಾವು ಓದಿದಾಗ, ಪಿತೃಗಳಿಗೆ ಮಾಡಿದ ವಾಗ್ದಾನಗಳು ಇತ್ತೀಚಿನವರೆಗೂ ಅಂದರೆ ಪ್ರಥಮ ಶತಮಾನದವರೆಗೂ ನೆರವೇರಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಅಂದರೆ ವಾಗ್ದಾನಗಳನ್ನು ಮಾಡಿದ 2000 ವರ್ಷಗಳವರೆಗೂ ಅವು ನೆರವೇರಿಲ್ಲವೆಂದು ದೃಢವಾಗುತ್ತದೆ. ಅಲ್ಲದೆ ಮುಂದೆ ಕ್ರಿಸ್ತನ ಮುಖಾಂತರ ನೆರವೇರಿಸಲ್ಪಡುವ ಕಾರ್ಯಗಳ ಬಗ್ಗೆಯೂ ಅವು ಒಳಗೊಂಡಿದೆಯೇ ಹೊರತು ಯೆಹೂದ್ಯರ ಚರಿತ್ರೆಯಲ್ಲಿ ನೆರವೇರಿದೆ ಎಂದು ಸಾಮಾನ್ಯವಾಗಿ ಹೇಳುವಂತೆ ನಡೆದಿಲ್ಲ.

---

ಸಂಪುಟ 1. ಸಂಚಿಕೆ 4 / 1982.

ಪ್ರಕಾಶಕರು:

ದಿ ಕ್ರಿಸ್ಟಡೆಲ್ಫಿಯನ್ಸ್,
23 /4, ಬೆನ್ಸನ್ ರಸ್ತೆ, ಬೆಂಗಳೂರು — 560 046, ಕರ್ನಾಟಕ,
(ಮೇಲ್ಕಂಡ ಸ್ಥಳದಲ್ಲಿ ಪ್ರತಿ ಭಾನುವಾರ ಸಂಜೆ 6:30 ಕ್ಕೆ ಸತ್ಯವೇದ ಪಾಠ (ಸದ್ಯಕ್ಕೆ ಇಂಗ್ಲೀಷಿನಲ್ಲಿ )ನಡೆಯುತ್ತದೆ. ಆಸಕ್ತಿಯುಳ್ಳವರಿಗೆ ಸುಸ್ವಾಗತ )

ಶ್ರೀ ಪೌಲನು 'ಅಬ್ರಹಾಮನಿಗೂ ಅವನ ಸಂತತಿಗೂ' ಆ ವಾಗ್ದಾನಗಳನ್ನು ಮಾಡಲಾಯಿತು ಎಂದು ಹೇಳುತ್ತಾನೆ. ಆ ವಾಗ್ದಾನಗಳೇನೆಂಬುದನ್ನು ಸ್ವಲ್ಪ ನೋಡೋಣ. ಈಗ ಅಬ್ರಹಾಮನ ಚರಿತ್ರೆ ಬರುವ ಹಳೆ ಒಡಂಬಡಿಕೆಯ ಭಾಗಕ್ಕೆ ಬರೋಣ.

ಯೆಹೋವನು ಅಬ್ರಾಮನಿಗೆ — ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುವೆನು..... ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು — ಎಂದು ಹೇಳಿದನು (ಆದಿ 12:1—3). ಆ ದೇಶವನ್ನೆಲ್ಲಾ ದೇವರು ಅವನಿಗೂ ಅವನ ಸಂತತಿಗೂ ಶಾಶ್ವತವಾಗಿ ಕೊಡುವುದಾಗಿ ವಾಗ್ದಾನ ಮಾ[illegible] (ಆದಿ 12:7, 13:14—17; 15:18; 17:8 ). ಮತ್ತು ಅವನ ಸಂತತಿಯ ಮೂಲಕ ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದವುಂಟಾಗುವುದೆಂದು ಹೇಳಿದನು (ಆದಿ 22:17—18). ಶ್ರೀ ಪೌಲನು ಇಸಾಕ, ಯಾಕೋಬರನ್ನು ಅಬ್ರಹಾಮನೊಂದಿಗೆ ಸಹ ಬಾಧ್ಯಸ್ಥರೆಂದು ಕರೆಯುತ್ತಾನೆ. (ಇಬ್ರಿಯ 11:9). ಆದ್ದರಿಂದ ಅವರಿಗೂ ಮಾಡಿದ ವಾಗ್ದಾನಗಳನ್ನು ನಾವು ನೋಡುವುದರಿಂದ, ಸುಬದ್ಧವಾದ ತಳಹದಿ ಹಾಕಿದಂತಾಗುತ್ತದೆ. ಅಲ್ಲದೆ ಆ ವಾಗ್ದಾನಗಳು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳಂತೆಯೇ ಇವೆ. ಯೆಹೋವನು ಇಸಾಕನಿಗೆ ಗೆರಾರಿನಲ್ಲಿ ದರ್ಶನ ಕೊಟ್ಟು, — ನಾನು ಅವನಿಗೆ (ಅಬ್ರಹಾಮನಿಗೆ) ಮಾಡಿದ ಪ್ರಮಾಣವನ್ನು ನೆರವೇರಿಸಿ, ನಿನ್ನ ಸಂತತಿಯವರನ್ನು ಆಕಾಶದಲ್ಲಿರುವ ನಕ್ಷತ್ರಗಳಷ್ಟಾಗಿ ಮಾಡಿ, ಅವರಿಗೆ ಈ ಪ್ರದೇಶಗಳನ್ನೆಲ್ಲಾ ಕೊಡುವೆನು. ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವುದು — ಅಂದನು (ಆದಿ 26:2—5). ಹಾಗೆಯೇ ಯಾಕೋಬನಿಗೆ ಮಾಡಿದ ವಾಗ್ದಾನವನ್ನೂ ನಾವು ನೋಡೋಣ. ಯಾಕೋಬನು ಖಾರಾನಿಗೆ ಹೋಗುವ ಮಾರ್ಗದಲ್ಲಿ ಬೇತೇಲ್ ಎಂಬ ಸ್ಥಳದಲ್ಲಿ ಮಲಗಿದ್ದಾಗ, ಯೆಹೋವನು ದರ್ಶನ ಕೊಟ್ಟು — ನೀನು ಮಲಗಿಕೊಂಡಿರುವ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ. ನಿನ್ನ ಸಂತತಿಯು ಭೂಮಿಯ ಧೂಳಿನಂತೆ ಅಸಂಖ್ಯವಾಗುವದು.... ನಿನ್ನ ಮೂಲಕವೂ ನಿನ್ನ ಸಂತತಿಯ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು (ಆದಿ 28:13—14; 3—4 ).

ಈ ವಾಗ್ದಾನಗಳನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ, ಅವುಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು:—

(1) ಪ್ರಥಮವಾಗಿ — ಅಬ್ರಹಾಮನ ಸಂತಾನವು ಬಹು ದೊಡ್ಡ ಹಾಗೂ ಬಲಶಾಲಿಯಾದ ಜನಾಂಗವಾಗಬೇಕು.

(2) ಎರಡನೆಯದಾಗಿ — ಅಬ್ರಹಾಮನೂ ಅವನ ಸಂತತಿಯೂ ವಾಗ್ದಾನದಲ್ಲಿ ಸೂಚಿಸಿದ ದೇಶವನ್ನು ಸ್ವಾಧೀನಪಡಿಸಿಕೊಳ್ಳುವುದು.

(3) ಮೂರನೆಯದಾಗಿ —ಅಬ್ರಹಾಮನ ಸಂತತಿಯಾದ ಕ್ರಿಸ್ತನು ಪ್ರಪಂಚವನ್ನು ಅಧೀನಪಡಿಸಿಕೊಳ್ಳುವುದು.

(4) ನಾಲ್ಕನೆಯದಾಗಿ — ಎಲ್ಲಾ ಜನಾಂಗಗಳವರೂ ಅಬ್ರಹಾಮನ ಮತ್ತು ಅವನ ಸಂತತಿಯಲ್ಲಿ ಆಶೀರ್ವಾದ ಹೊಂದುವುದು.

ಈ ಮೇಲ್ಕಂಡ ನಾಲ್ಕು ಭಾಗಗಳನ್ನು ಒಂದೊಂದಾಗಿ ನೋಡೋಣ.

**(1) ಅಬ್ರಹಾಮನ ಸಂತಾನವು ವೃದ್ಧಿಯಾಗಿ ಒಂದು ಬಲಿಷ್ಠ ಜನಾಂಗವಾಗಬೇಕು.**

ಈ ವಾಗ್ದಾನವು ನೆರವೇರಿದೆಯೇ ? ಇಲ್ಲ. ಇದು ಇನ್ನೂ ನೆರವೇರಬೇಕಾಗಿದೆ. ನಿಜ, ಶರೀರ ಸಂಬಂಧದಲ್ಲಿ ಅಬ್ರಹಾಮನ ಸಂತಾನವು ದೇಶದಲ್ಲೆಲ್ಲಾ ಹಬ್ಬಿದೆ. ಆದರೆ ಶ್ರೀ ಪೌಲನು ರೋಮಾಪುರದವರಿಗೆ ಬರೆದಿರುವಂತೆ ಇಷ್ಟೇ ಸಾಲದು. ಮೋಶೆ ಆರೋನರಿಗೆ ವಿರುದ್ಧವಾಗಿ ಗೊಣಗುಟ್ಟಿದ ದಿನದಿಂದ ಮೊದಲ್ಗೊಂಡು ಮೋಶೆಯಂತಹ ಪ್ರವಾದಿಯನ್ನು ನಿರಾಕರಿಸಿದ ದಿನದ ವರೆಗೂ ಸಾಮಾನ್ಯ ಯೆಹೂದ್ಯರು ಮೊಂಡು ಸ್ವಭಾವವುಳ್ಳವರಾಗಿ, ಅನ್ಯ ಜಾತಿಯ ಮಾರ್ಗಗಳಲ್ಲಿ ನಡೆಯುತ್ತಾ, ದೇವರ ಸೇವಕರನ್ನು ಹಿಂಸಿಸಿ, ಕೊಲೆ ಮಾಡುತ್ತಾ ಇರುತ್ತಾರೆ; ಅಬ್ರಹಾಮನಿಗೆ ವಾಗ್ದಾನ ಮಾಡಿದಂತೆ ''ಆಕಾಶದ ನಕ್ಷತ್ರಗಳಿಗಿಂತಲೂ ಹೆಚ್ಚಿಸಿ ವೃದ್ಧಿಪಡಿಸುವ ಮಹಾ ಜನಾಂಗ'' ಇದಲ್ಲ. ಶ್ರೀ ಪೌಲನು ಹೇಳುತ್ತಾನೆ : ಶರೀರ ಸಂಬಂಧದಿಂದ ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ.... ವಾಗ್ದಾನ ಸಂಬಂಧವಾಗಿ ಹುಟ್ಟಿದವರೇ ಅಬ್ರಹಾಮನ ಸಂತತಿಯವರು (ರೋಮಾ 9:6—8).

(ಮುಂದುವರೆಯುವುದು.

ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು..... ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೂ ಆಧಾರವೂ ಆಗಿದ್ದು ಪಾಪ ವಿಶುದ್ಧಿ ಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು.

— ಇಬ್ರಿಯ 1:1—3.

## ಮೂಲ ನಂಬಿಕೆಗಳು (ಹಿಂದಿನ ಸಂಚಿಕೆಯಿಂದ)

### ಮನುಷ್ಯನು

2. ಮಾನವನು ನಿತ್ಯ ಜೀವಿಯೇ?

ಇಲ್ಲ. ಆತನು ಮರ್ತ್ಯನು. ಅಂದರೆ ಸಾಯುವಂಥವನು. ಅವನು ಸತ್ತು ಧೂಳಿಗೆ ಹಿಂದಿರುಗುತ್ತಾನೆ.

ಯೋಬ 14:10; 4:17; ಪ್ರಸಂಗಿ 3:19–20; ಕೀರ್ತನೆ 89:48.

3. ಈ ಲೋಕದ ಅನೇಕ ಮತೀಯರ ಪದ್ಧತಿಗಳ ನಂಬಿಕೆಯ ಪ್ರಕಾರ, ಮನುಷ್ಯನು ಸತ್ತ ವೇಳೆ ಆತನದೊಂದು ಭಾಗ ಸಾಯದೆ ಹಾಗೆಯೇ ಇರುತ್ತದೆಯೇ?

ಇಲ್ಲ. ಅಂತಹ ತತ್ವವು ಸತ್ಯವೆಂದು ತಿಳಿದಿರುವ ಅನೇಕ ಮತೀಯರ ಸುಳ್ಳುಗಳಲ್ಲೊಂದಾಗಿದೆ. ಮಾನವನು ಸಂಪೂರ್ಣವಾಗಿ ಮರ್ತ್ಯನು (ಸಾಯುವಂತವನು). ದೇವರೊಬ್ಬನೇ ಅಮರತ್ವವುಳ್ಳವನಾಗಿದ್ದಾನೆ. ನಿತ್ಯಜೀವವು ಮನುಷ್ಯನು ಹುಡುಕುವಂತದ್ದಾಗಿದೆ. ಅದು ವಾಗ್ದಾನ ಮತ್ತು ನಿರೀಕ್ಷೆಗೆ ಸೇರಿರುವಂತಾದ್ದಾಗಿದೆ.

ಆದಿ 3:4; ಯೆರೆ 16:19; 1 ತಿಮೋಥೆ 6:16; 1:17; ರೋಮಾ 2:7; 2 ತಿಮೋಥೆ 1:10; ತೀತ 1:2; 1 ಯೋಹಾನ 2:25.

4. ಮಾನವನ ಶರೀರವು ಮರ್ತ್ಯವಾದರೂ ಅವನ ಜೀವವು ಅಮರವಾದದ್ದಲ್ಲವೇ?

ಮಾನವನ ಜೀವವು ಅವನಲ್ಲಿಲ್ಲ. ಆತನು ದೇವರ ಶಕ್ತಿಯಿಂದ ಜೀವಿಸುತ್ತಾನೆ. ಮತ್ತು ಮನುಷ್ಯನು ಸತ್ತಾಗ ಅದು ಹಿಂದಿರುಗುತ್ತದೆ. ದೇವರು ಅದನ್ನು ತನ್ನಲ್ಲಿಗೇ ತಾನೇ ಹಿಂತೆಗೆದು ಕೊಂಡರೆ, ಪ್ರಪಂಚದಿಂದ ಮಾನವನು ನಾಶವಾಗುವನು.

ಕೀ 36:9; ಅ.ಕೃ.17:28; ಯೋಬ 12:10; ಪ್ರಸಂಗಿ 12:7; ಯೋಬ 34:14; ಯೆಶಾಯ 2:22.

5. ಹಾಗಿದ್ದಲ್ಲಿ ಮಾನವನು ಮರಣದಲ್ಲಿ ಪ್ರಜ್ಞೆ ಹೊಂದಿರುವುದಿಲ್ಲವೇ?

ಮಾನವನಿಗೆ ಮರಣದಲ್ಲಿ ಯಾವ ವಿಧವಾದ ಪ್ರಜ್ಞೆಯು ಇರುವಿಕೆಯೂ ಇರುವುದಿಲ್ಲ. ಆತನು ಸತ್ತಿದ್ದಾನೆ — ಸದ್ಯಕ್ಕೆ ಅವನು ಸಂಪೂರ್ಣವಾಗಿ ಸತ್ತಿದ್ದಾನೆ. ಹುಟ್ಟಲೇ ಇಲ್ಲವೆಂಬಂತೆ ಏನನ್ನೂ ತಿಳಿಯುವುದಿಲ್ಲ.

ಪ್ರಸಂಗಿ ವಿ 9:5. ಕೀರ್ತನೆ 6:5. ಪ್ರಸಂಗಿ 9:10. ಕೀರ್ತನೆ 146:34; ಯೆಶಾಯ 38:18–19. ಯೋಬ 10:18–19.

6. ಮಾನವನು ಏಕೆ ತನ್ನ ಈಗಿನ ಮರ್ತ್ಯ(ಸಾಯುವ) ಹಾಗೂ ಕೆಡುಕಿನ ಸ್ಥಿತಿಯಲ್ಲಿದ್ದಾನೆ ?

ಮಾನವನು ಪಾಪದಿಂದಾಗಿ ಮರ್ತ್ಯನಾಗಿದ್ದಾನೆ. ಪಾಪಿಗಳು ಸಾಯಲೇ ಬೇಕೆಂಬುದು ದೇವರ ಕಟ್ಟಳೆಯಾಗಿದೆ. , ನಮ್ಮ ಪ್ರಥಮ ತಂದೆಯಾದ ಆದಾಮನು ಪಾಪ ಮಾಡಿದನು ಮತ್ತು ಆತನು ಮಕ್ಕಳನ್ನು ಪಡೆಯುವ ಮೊದಲೇ ಅವನು ಮರಣಕ್ಕೆ ಗುರಿಯಾದನು. ಮರಣವು ಆತನಲ್ಲಿ ಪ್ರಾರಂಭವಾಯಿತು ಮತ್ತು ಅವನ ಮೂಲಕ ನಮಗೆ ಬಂತು. ಅವನು ಮರಣ ದಂಡನೆಗೆ ಗುರಿಯಾದ ವೇಳೆ ಆತನು ಹೊಂದಿದ ಪ್ರಕೃತಿಯನ್ನೇ ನಾವು ಪಡೆಯುತ್ತೇವೆ. ಆದ್ದರಿಂದ ಆತನ ಮರಣ ದಂಡನೆಯನ್ನು ನಾವು ಪಾರಂಪರ್ಯವಾಗಿ ಪಡೆಯುತ್ತೇವೆ. ಅಲ್ಲದೆ, ನಾವುಗಳೆಲ್ಲರೂ ಪಾಪಿಗಳೇ ಆಗಿರುತ್ತೇವೆ.

ರೋಮಾ 6:23. 5:12; ಆದಿ 3:17–19; 1 ಕೊರಿಂಥ 15:22; ರೋಮಾ 5:18; 3:23; 2 ಕೊರಿಂಥ 1:9; 1 ಕೊರಿಂಥ 15:53; ರೋಮಾ 7:24 2 ಕೊರಿಂಥ 4:11.

7. ಮಾನವ ಜನಾಂಗವು ಈಗಿರುವಂತೆಯೇ ಕೆಡುಕಿನ ಸ್ಥಿತಿಗೆ ಎಂದೆಂದಿಗೂ ಒಳಪಟ್ಟಿರಲೇ ಬೇಕೆಂದು ದೇವರು ಉದ್ದೇಶಿಸಿದ್ದಾನೋ?

ಇಲ್ಲ. ಈ ಲೋಕದಿಂದ ಪಾಪವನ್ನು ಸಂಪೂರ್ಣವಾಗಿ ತೆಗೆದು ಹಾಕಿ, ಮರಣವು ಇಲ್ಲದಂತೆ ಮಾಡಲು ಉದ್ದೇಶಿಸಿದ್ದಾನೆ.

ಹೋಶೇಯ 13:14; ಯೆಶಾಯ 25:8; ಪ್ರಕ 21:4; 1 ಕೊರಿಂಥ 15:26; ಯೋಹಾನ 1:29; 2 ತಿಮೋಥೆ 1:10.

8. ಮಾನವರು ತನ್ನನ್ನು ಸುಪ್ರೀತನನ್ನಾಗಿ ಮಾಡಲಿ ಅಥವಾ ಮಾಡದೇ ಇರಲೀ, ದೇವರು ಈ ಮಹಾ ಬದಲಾವಣೆಯನ್ನು ತರುತ್ತಾನೋ?

ಇಲ್ಲ. ಈ ಕಾರ್ಯವು ಸಂಪೂರ್ಣವಾಗಿ ನೀತಿಯಲ್ಲಿ ನಡೆಸಲ್ಪಡುತ್ತದೆ. ಪಾಪದಿಂದ ಮರಣವು ಹೇಗೆ ಬಂತೋ ಹಾಗೆಯೇ ಜೀವವು ವಿಧೇಯತ್ವದಿಂದ ಬರುತ್ತದೆ.

ರೋಮಾ 5:19.3:21–22;1 ಕೊರಿ 6:9;1 ಪೇತ್ರ 4:18;ಗಲಾತ್ಯ 6:7; ಮತ್ತಾಯ 5:20.

(ಮುಂದುವರೆಯುವುದು.

ನಂಬಿಕೆಯನ್ನು ಕಾಪಾಡಿಕೊಳ್ಳಲು ಹೋರಾಡಿರಿ.
— ಯೂದ 3.

"ಗಂಟಲೆತ್ತಿ ಕೂಗು, ಸಂಕೋಚ ಪಡ ಬೇಡ, ಕೊಂಬಿನಂತೆ ದನಿಗೈದು, ನನ್ನ ಜನರಿಗೆ ಅವರ ದ್ರೋಹವನ್ನು ತಿಳಿಸು. ಯಾಕೋಬ ವಂಶದವರಿಗೆ ಅವರ ಪಾಪಗಳನ್ನು ಅರುಹು." ಸತ್ಯ ಮತ್ತು ಅದರ ಪ್ರೀತಿಯಿಂದ ತುಂಬಿದಂತಹ ಒಬ್ಬ ಮನುಷ್ಯನು ಮನಃಪೂರ್ವಕವಾಗಿ ಹಾಗೂ ಒಪ್ಪುದ ರೀತಿಯಲ್ಲಿ ನಿಂದನೆ ಮಾಡುವವರನ್ನು ಕಟುವಾಗಿ ಹಾಗೂ ತೀವ್ರವಾಗಿ ಖಂಡಿಸುವುದನ್ನು ನಾವು ಇನ್ನೂ ನೋಡ ಬೇಕಾಗಿದೆ. ಎಲ್ಲಿ ಮನುಷ್ಯನ ನಂಬಿಕೆಯು ಬಲಹೀನವಾಗಿರುತ್ತದೋ, ಎಲ್ಲಿ ಅವರ ಮನಸ್ಸು ಅನಿಶ್ಚಯತೆಯಿಂದ ತುಂಬಿರುತ್ತದೋ ಮತ್ತು ತಮ್ಮ ಕೃತ್ಯಗಳು ಬೆಳಕನ್ನು ಹೊಂದುವುದಿಲ್ಲವೆಂಬ ಅರಿವು ಅವರಿಗಿರುತ್ತದೋ, ಅಂಥವರಲ್ಲಿ ಸತ್ಯವನ್ನು ಇರುವಂತೆಯೇ ಹೇಳಲು ಅಂಜಿ, ಹೆಚ್ಚಿನ "ಪ್ರೀತಿ"ಯಿಂದ ಮಾತಾಡುವವರಾಗಿರುತ್ತಾರೆ. ಅವರ ಕನಿಕರವೆಲ್ಲವೂ ವಾಕ್ಯವನ್ನು ಕೆಡಿಸುವವರ ಮತ್ತು ಅವಿಧೇಯರಾಗಿರುವಂಥವರಾಗಿರುತ್ತದೆ. ಅದು ತೊಂದರೆ ಮಾಡೀತೆಂದು ಅವರು ತಮ್ಮ ಮನಸ್ಸಿಗೆ ನೋವಾಗಲು ಇಚ್ಛಿಸುವುದಿಲ್ಲ. ಅದು ತಮ್ಮನ್ನು ಅಪ್ರಾಮುಖ್ಯತೆಗೆ ತರುತ್ತದೆಂದು ಸತ್ಯವನ್ನು ಇರುವಂತೆಯೇ ಹೇಳಲಿಚ್ಛಿಸುವುದಿಲ್ಲ; ಅಥವಾ ಅದರ ಭರವಸೆಯನ್ನೇ ಅರಿಯದ ಇವರನ್ನು ಸತ್ಯಕ್ಕಾಗಿ ಹೋರಾಡುವ ಸಂಭವ ಬರಬಹುದೆಂಬ ಭಯ ಹೊಂದಿದವರಾಗಿರುತ್ತಾರೆ.

— ಡಾ: ಜೆ. ಥಾಮಸ್

(ಕನ್ನಡ ಅನುವಾದ)

ನಮ್ಮಲ್ಲಿ ದೊರೆಯುವ ಉಚಿತ ಕರಪತ್ರ/ ಕಿರು ಹೊತ್ತಗೆಗಳಿಗೆ ಬರೆಯಿರಿ:—

1. ನೀವು ತಿಳಿಯಲೇ ಬೇಕಾದ ಏಳು ಸಂಗತಿಗಳು.
2. ಕರ್ತನು ಹೀಗೆ ಹೇಳುತ್ತಾನೆ.
3. ದೈನಂದಿನ ಸತ್ಯವೇದ ಪಠಣ ತಃಖ್ತೆ.
4. ಸತ್ಯದಲ್ಲಿ ಜೀವಿಸುವುದು.
5. ಮೂಲ ಸುವಾರ್ತೆ,
6. ಲೂಸಿಫರನು ಯಾರು ?
7. ಸೈತಾನನು ಸಂಪ್ರದಾಯದೊಂದೇ ಅಥವಾ ಸತ್ಯವೇದದೊಂದೇ?

—:o:0:o—

ಅಲ್ಲದೆ ಇತರೆ ಭಾಷೆಗಳಲ್ಲಿಯೂ (ಇಂಗ್ಲಿಷ ಸಹ) ಕೆಲವು ಕರಪತ್ರ / ಕಿರು ಹೊತ್ತಗೆಗಳು ಉಚಿತವಾಗಿ ನಮ್ಮಲ್ಲಿ ದೊರೆಯುವು — ಇಂದೇ ಬರೆಯಿರಿ.

ಸ್ಥಳೀಯ ವಿಳಾಸಗಳು:—

ದಿ ಕ್ರಿಸ್ಟಡೆಲ್ಫಿಯನ್ಸ್,
ಕೇರ್ ಆಫ್ ಸಿಟಿ ಡ್ರಗ್ ಹೌಸ್,
ರಾಜೇಂದ್ರ ಪ್ರಸಾದ್ ರಸ್ತೆ,
ಮಂಡ್ಯ 571 401,
ಕರ್ನಾಟಕ.

ದಿ ಕ್ರಿಸ್ಟಡೆಲ್ಫಿಯನ್ಸ್,
ಜಿ.ಪಿ.ಓ. ಬಾಕ್ಸ್ 159
ಹೈದರಾಬಾದ್ 500 001.
ಆಂಧ್ರ ಪ್ರದೇಶ.

ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನು ಪಾಪಕ್ಕೊಳಗಾಗಿದ್ದಾನೆ.
— ಯಾಕೋಬ 4:17.